# ಇಂದಿನ ಪರಿಸರದಲ್ಲಿ ಧರ್ಮಾನುಷ್ಠಾನದ ಪ್ರಸ್ತುತತೆ

**ಸ್ವಾಮಿ ಹರ್ಷಾನಂದ**

### 'ತಾನುಂಟೋ ಮೂರು ಲೋಕವುಂಟೋ?'

ಪುರಾಣಗಳ ಪ್ರಕಾರ ನಾವಿಂದು ಕಲಿಯುಗದಲ್ಲಿದ್ದೇವೆ. ಶ್ರೀಮದ್ಭಾಗವತದಲ್ಲಿ ಬರುವ ಕಥೆಯಂತೆ (ಸ್ಕಂಧ ೧.೧೭.೩೮) ಇವು ಕಲಿಯುಗದ ಐದು ಲಕ್ಷಣಗಳು: **ಅನೃತ, ಮದ, ಕಾಮ, ವೈರ ಮತ್ತು ಹಿಂಸೆ.** ಈ ಪಟ್ಟಿಗೆ ಸೇರಿಸಿದ ಮತ್ತೂ ಮೂರೆಂದರೆ **ಕುಡಿತ, ಜೂಜು ಮತ್ತು ವ್ಯಭಿಚಾರ.** ಇವೆಲ್ಲಕ್ಕೂ ಮೂಲ ಚಿನ್ನ ಅಥವಾ ಹಣ!

ಭರ್ತೃಹರಿಯು ತನ್ನ ನೀತಿ ಶತಕದಲ್ಲಿ (ಶ್ಲೋಕ, ೩೨), **ಸರ್ವೇ ಗುಣಾಃ ಕಾಂಚನಮ್ ಆಶ್ರಯಂತಿ:** *ಎಲ್ಲ 'ಸದ್ಗುಣ'ಗಳೂ ಕಾಂಚನವನ್ನೇ ಆಶ್ರಯಿಸಿವೆ* ಎಂದು ಹೇಳಿದರೆ, ಶ್ರೀರಾಮಕೃಷ್ಣರು ಕಾಮ–ಕಾಂಚನಗಳೇ ಈ ಯುಗದ ಪ್ರಧಾನ ಲಕ್ಷಣವೆಂದು ಘೋಷಿಸಿದ್ದಾರೆ.

ಇಂದಿನ ಮಾನವನು ತನ್ನ ಕಣ್ಣೆದುರಿಗೇ ಎಲ್ಲರೂ ತಮಗೆ 'ಬೇಕಾದ ಎಲ್ಲವನ್ನೂ' ಕೇವಲ ಹಣದ ಮೂಲಕವೇ ಪಡೆಯುತ್ತಿರುವಾಗ ದೇವರು, ಸತ್ಯ, ಧರ್ಮ ಎಂಬ ಗತಕಾಲದ, ಹಳಸಿಹೋದ ತತ್ತ್ವಗಳಿಗೇಕೆ ಬೆಲೆ ಕೊಡಬೇಕು? ಆದುದರಿಂದ ಎಲ್ಲಿಯವರೆಗೆ ಪರಿಣಾಮವು ಸುಖಾಂತ್ಯವಾಗಿರುವುದೋ ಅಲ್ಲಿಯವರೆಗೆ ಅನುಸರಿಸುವ ಮಾರ್ಗವು ಯಾವುದಾದರೇನು? – ಇದು ಆಧುನಿಕ ಮಾನವನ ಫಿಲಾಸಫಿ ಅಥವಾ ದರ್ಶನ!

> **ಊರ್ಧ್ವಬಾಹುರ್ವಿರೌಮ್ಯೇಷ**
> **ನ ಹಿ ಕಶ್ಚಿತ್ ಶೃಣೋತಿ ಮೇ ।**
> **ಧರ್ಮಾದರ್ಥಶ್ಚ ಕಾಮಶ್ಚ**
> **ಸ ಧರ್ಮಃ ಕಿಂ ನ ಸೇವ್ಯತೇ ॥**
>
> **" ಎರಡೂ ಕೈಗಳನ್ನು ಎತ್ತಿಹಿಡಿದು ಹೇಳುತ್ತಿದ್ದೇನೆ. ಆದರೂ ಯಾರೂ ಕೇಳುತ್ತಿಲ್ಲವಲ್ಲ! ಏನೆಂದು? ಧರ್ಮಾನುಸರಣೆಯಿಂದಲೇ ಅರ್ಥ, ಕಾಮ ಮುಂತಾದ ಪುರುಷಾರ್ಥಗಳು ಸಿದ್ಧಿಸುತ್ತವೆ. ಅಂತಹ ಧರ್ಮವನ್ನು ಏಕೆ ತಾನೆ ಪಾಲಿಸಬಾರದು? "**
>
> **– *ವ್ಯಾಸ ಮಹರ್ಷಿ***

ಇದರ ಫಲ? ಸ್ವಾರ್ಥಕ್ಕಾಗಿ ಪರಾರ್ಥದ ಬಲಿ. ನನ್ನ ಹಿತವನ್ನು ಸಾಧಿಸಿಕೊಳ್ಳುವಾಗ ಸಮಾಜಕ್ಕಾಗಲಿ, ದೇಶಕ್ಕಾಗಲಿ ಹಾನಿಯುಂಟಾದರೆ ಆಗಲಿ! ಎಷ್ಟಾದರೂ ಗಾದೆಯೇ ಹೇಳಿಲ್ಲವೇ, 'ತಾನುಂಟೋ ಮೂರು ಲೋಕವುಂಟೋ?' ಎಂದು!

### ಧನದಾಹದಿಂದಾಗುವ ಹಾನಿಗಳು

ಧನದಾಹದಿಂದಾಗುವ ಹಾನಿಗಳು ಎರಡು: ಧನಾರ್ಜನೆಗಾಗಿ ಮೋಸ, ಕುಟಿಲತೆ, ಹಿಂಸೆ; ಯಥೇಷ್ಟವಾಗಿ ಸಂಪಾದಿಸಿದ ನಂತರ ಅದನ್ನು ಖರ್ಚು ಮಾಡುವ, ಭೋಗ ಶತ್ರುನಾಶ ಮೊದಲಾದ ರೀತಿಗಳು. ಇದರ ಪರಿಣಾಮವಾಗಿ ಬಾಹ್ಯದಲ್ಲಿಯೂ ಅಶಾಂತಿ, ಅತೃಪ್ತಿ; ಆಂತರ್ಯದಲ್ಲಿಯೂ ಅಶಾಂತಿ, ಅತೃಪ್ತಿ.

ಇದರ ಮೂಲ ಕಾರಣ ಧನದಾಹವೇ ಹೊರತು ಧನವಲ್ಲ. ದೀಪದ ಬೆಳಕನ್ನು ಮೋಸದ ಸಹಿ ಹಾಕುವುದಕ್ಕೆ ಉಪಯೋಗಿಸಿದರೆ, ಚಾಕುವನ್ನು ಕೊಲೆ ಮಾಡಲು ಉಪಯೋಗಿಸಿದರೆ ಅದು ದೀಪದ ಅಥವಾ ಚಾಕುವಿನ ತಪ್ಪಲ್ಲ; ಏಕೆಂದರೆ ದೀಪದ ಬೆಳಕಿನಿಂದ ದಾರಿ ತೋರಲು, ಚಾಕುವಿನಿಂದ ಹಣ್ಣನ್ನು ಕುಯ್ದು ದೇವರಿಗರ್ಪಿಸಲು ಸಾಧ್ಯವಿಲ್ಲವೆ? ಹಾಗೆಯೇ ಧನವನ್ನು ಸದುಪಯೋಗಪಡಿಸಲೂ ಸಾಧ್ಯ.

**ಇಂತಹ ಸದುಪಯೋಗವನ್ನು ಕಲಿಸುವ ಕಲೆಯೇ ಧರ್ಮ, ಧರ್ಮಾನುಷ್ಠಾನ.**

### ಧರ್ಮವೆಂದರೇನು?

ಧರ್ಮವೆಂದರೇನು? ಅದರ ಅನುಷ್ಠಾನವನ್ನು ಹೇಗೆ ಮಾಡುವುದು? **'ಧಾರಣಾದ್ ಧರ್ಮ ಇತ್ಯಾಹುಃ'**('ಜಗತ್ತನ್ನು ಧರಿಸಿರುವುದರಿಂದ ಅದನ್ನು ಧರ್ಮವೆಂದು ಕರೆಯುತ್ತಾರೆ') ಎನ್ನುತ್ತದೆ ಮಹಾಭಾರತ. ಅದೇ ಈಶ್ವರ, ಪರಮಾತ್ಮ, ದೇವರು. ಇದು ಯೌಗಿಕಾರ್ಥ. ಆದುದರಿಂದ ಇಡೀ ಸೃಷ್ಟಿಯನ್ನೇ ಧರಿಸಿರುವ ಶಕ್ತಿಯೇ ಧರ್ಮ.

ಆ ದೇವರನ್ನು ಕಾಣಲು ಸಹಾಯವೆಸಗುವ ಸಾಧನಾ ಪಥವೂ ಧರ್ಮವೇ. ಉದಾಹರಣೆಗೆ ಜ್ಞಾನಯೋಗ, ಭಕ್ತಿಯೋಗ, ರಾಜಯೋಗ ಮತ್ತು ಕರ್ಮಯೋಗ. ಇದು ಮೊದಲನೆ ರೂಢ್ಯರ್ಥ.

'ತಾಯ್ತಂದೆಯರ ಸೇವೆ ನಮ್ಮ ಧರ್ಮ' ಎಂಬಂತಹ ಕಡೆ ಧರ್ಮವೆಂದರೆ ಕರ್ತವ್ಯಕರ್ಮ. ಇದು ಎರಡನೆ ರೂಢ್ಯರ್ಥ.

ಮನುಸ್ಮೃತಿಯೇ ಮೊದಲಾದ ಧರ್ಮಶಾಸ್ತ್ರಗಳ ಪ್ರಕಾರ ಧರ್ಮದ ತಿರುಳೇ ಅಹಿಂಸೆ, ಸತ್ಯವಚನ, ಕೊಟ್ಟಮಾತನ್ನು ನಡೆಯಿಸುವುದು, ಇತರರ ವಸ್ತುವನ್ನು ಅಪಹರಿಸದಿರುವುದು ಮತ್ತು ದಯೆಯೇ ಮೊದಲಾದ ಸದ್ಗುಣಗಳು. ಇಂದಿನ ಪರಿಸ್ಥಿತಿಯಲ್ಲಿ ಇದನ್ನೇ ಧರ್ಮ ಶಬ್ದದ ಮುಖ್ಯಾರ್ಥವಾಗಿ ಪರಿಗಣಿಸಬಹುದು.

ಪತಂಜಲಿಯ ಯೋಗಸೂತ್ರಗಳಲ್ಲಿ (೨.೩೦.೩೨)

**ಜಾಗೃತಿಪ ಮತಿಧರ್ಮ**
**ವಕ್ರ ಋಜುಮಿಶ್ರ ಜಗವದರ ಶೋಧನೆ ಧರ್ಮ**
**ಪ್ರಾಕೃತಧ್ವನಿಮಿಶ್ರವದರಡುಗೆ ರಾಗ**
**ವ್ಯಾಕೃತದಿನವ್ಯಾಕೃತದಿ ಸತ್ತ್ವಕೆ ನಿನ್ನ**
**ಜಾಗೃತಿಪ ಮತಿ ಧರ್ಮ-ಮಂಕುತಿಮ್ಮ** *-ಡಿ.ವಿ.ಜಿ*

ಜಗತ್ತು ಡೊಂಕು-ನೇರಗಳ ಮಿಶ್ರಣವಾಗಿದೆ. ಹಾಗೆಯೆ ಸಂಸ್ಕಾರ ಸಹಿತ-ರಹಿತದ ಮಿಶ್ರಣರಾಗವಾಗಿದೆ. ಅದರ ಅರಿವು ಪಡೆಯುವುದು ಧರ್ಮವಾಗಿದೆ. ಹಾಗೆ ಮಾಡುತ್ತ, ನಾಮರೂಪ ರಹಿತ-ಸಹಿತ ಆದಿಸತ್ತ್ವವನ್ನು ಜಾಗೃತಗೊಳಿಸುವ ಬುದ್ಧಿಯೇ ಧರ್ಮವಾಗಿದೆ.

ಹೇಳಿರುವ ಯಮ-ನಿಯಮಗಳನ್ನು ಇಂದಿನ ಪರಿಸರದಲ್ಲಿ ಧರ್ಮಾನುಷ್ಠಾನದ ಅಡಿಗಲ್ಲೆಂದು ಭಾವಿಸಬಹುದು.

**ಯಮ**ವೆಂದರೆ ಅಹಿಂಸೆ, ಸತ್ಯ, ಅಸ್ತೇಯ (ಕದಿಯದಿರುವುದು), ಬ್ರಹ್ಮಚರ್ಯ ಮತ್ತು ಅಪರಿಗ್ರಹ(ನಮ್ಮ ಆವಶ್ಯಕತೆಗಿಂತ ಹೆಚ್ಚುವಸ್ತುಗಳನ್ನು ಸಂಗ್ರಹಿಸದಿರುವುದು)

**ನಿಯಮ**ವೆಂದರೆ ಶೌಚ (ದೇಹವನ್ನೂ, ಪರಿಸರವನ್ನೂ ಶುಚಿಯಾಗಿಡುವುದು), ಸಂತೋಷ (ತೃಪ್ತಿ), ತಪಸ್ಸು (ಸರಳ ಜೀವನ), ಸ್ವಾಧ್ಯಾಯ (ಶಾಸ್ತ್ರಾಧ್ಯಯನ, ಮಂತ್ರಜಪ) ಮತ್ತು ಈಶ್ವರಪ್ರಣಿಧಾನ (ದೇವರಲ್ಲಿ ಭಕ್ತಿ). ನಿಯಮವು ವೈಯಕ್ತಿಕ ಜೀವನಕ್ಕೂ ಯಮವು ಸಾಮಾಜಿಕ ಜೀವನಕ್ಕೂ ಅನ್ವಯಿಸುತ್ತದೆ.

**ಇಂದಿನ ಕಲುಷಿತ ವಾತಾವರಣದಲ್ಲಿ ಆಗುತ್ತಿರುವ ಅನಾಹುತಗಳೇನು?**

* ಅತ್ಯಂತ ಪೈಶಾಚಿಕ ರೀತಿಯಲ್ಲಿ ಕೊಲೆ ಮತ್ತು ಹಿಂಸೆ.
* ಹಣಕ್ಕಾಗಿ, ಆಸ್ತಿಗಾಗಿ, ಅಧಿಕಾರಕ್ಕಾಗಿ, ಮಾಡಿದ ಅಪರಾಧಗಳಿಂದ ತಪ್ಪಿಸಿಕೊಳ್ಳುವುದಕ್ಕಾಗಿ, ಸುಳ್ಳು ಹೇಳುವುದು.
* ಇತರರ ಆಸ್ತಿಯನ್ನು ಮೋಸದಿಂದ ದೋಚುವುದು.
* ಅತ್ಯಂತ ಹೀನಾಯವಾದ ಲೈಂಗಿಕ ಅಪರಾಧಗಳು, ವ್ಯಭಿಚಾರ ಇತ್ಯಾದಿಗಳು.
* ಆವಶ್ಯಕತೆಗಿಂತ ಅತ್ಯಧಿಕವಾಗಿ ಧನಸಂಗ್ರಹ.

**ಇವುಗಳಿಂದ ಉಂಟಾಗುವ ಭೀಕರ ಪರಿಣಾಮಗಳು:**

- ನಿರ್ದೋಷಿಗಳೂ ಅಮಾಯಕರೂ ಸಹ ಜೀವವನ್ನೋ ಅಂಗಾಂಗಗಳನ್ನೋ ಕಳೆದುಕೊಳ್ಳುತ್ತಾರೆ.
- ಯಾರೂ ಯಾರನ್ನೂ ನಂಬದಂತಹ ಸಂಶಯದ ವಾತಾವರಣವುಂಟಾಗುತ್ತದೆ.
- ಆಸ್ತಿಯನ್ನು ಕಳೆದುಕೊಂಡವರು ಆತ್ಮಹತ್ಯೆಗೋ, ಪ್ರತೀಕಾರಕ್ಕೋ ಹಿಂಸೆಗೋ ಬಲಿಯಾಗಬಹುದು.
- ಭಯಂಕರ ರೋಗಗಳೂ, ಅನೈತಿಕ ಸಂಬಂಧಗಳೂ ಅತಿಯಾಗಬಹುದು.
- ಬಡವಬಲ್ಲಿದರ ನಡುವಣ ಭೇದವು ಮಿತಿಮೀರಿ ಬೆಳೆದು ನಕ್ಸಲೀಯರಂತಹ ಚಟುವಟಿಕೆಗಳು ತಲೆಯೆತ್ತಬಹುದು.

ಇವುಗಳನ್ನು ಸಮರ್ಥವಾಗಿ ಪರಿಹರಿಸಬೇಕಾದರೆ ಧರ್ಮದ ಅವಿಭಾಜ್ಯ ಅಂಗಗಳಾದ ಯಮ-ನಿಯಮಗಳನ್ನು ಅನುಷ್ಠಾನಕ್ಕೆ ತರುವುದೊಂದೇ ದಾರಿ.

**ಯಮ**

**ಅಹಿಂಸೆ:** ದೇಹದಿಂದಲೂ ಮಾತಿನಿಂದಲೂ ಇತರರಿಗೆ ನೋವಾಗದಂತೆ ನಡೆದುಕೊಳ್ಳುವುದು ಅಹಿಂಸೆ. ಆದರೆ ಇದು ಹೇಡಿಯ ಅಹಿಂಸೆಯಾಗಬಾರದು. ದುಷ್ಟರನ್ನು ಪ್ರತಿಭಟಿಸುವ ಶಕ್ತಿಯನ್ನು ಸಂಪಾದಿಸುವುದಲ್ಲದೆ ಅದನ್ನು ಸಮಯ ಬಂದಾಗ ಸ್ವರಕ್ಷಣೆಗಾಗಲೀ, ಧರ್ಮ-ಸಮಾಜಗಳ ರಕ್ಷಣೆಗಾಗಲೀ ಉಪಯೋಗಿಸಬೇಕು. ಇದೂ ಅಹಿಂಸೆಯ ಅಂಗವೇ.

**ಸತ್ಯ:** ನಿರ್ದೋಷಿಗಳನ್ನೂ ಸತ್ಪುರುಷರನ್ನೂ ರಕ್ಷಿಸುವ ಸಲುವಾಗಿ ನಿಜ ಹೇಳುವುದು, ಕೊಟ್ಟ ಮಾತನ್ನುಳಿಸಿಕೊಳ್ಳುವುದು ಸತ್ಯ. ಇದು ದೈನಂದಿನ ವ್ಯಾವಹಾರಿಕ ಜೀವನದಲ್ಲೂ ಆವಶ್ಯಕ. ಈ ಸಮಾಜ, ಪ್ರಪಂಚ ನಿಂತಿರುವುದೇ ಪರಸ್ಪರ ನಂಬಿಕೆಯ ಮೇಲೆ.

**ಅಸ್ತೇಯ:** ನಮಗೆ ನ್ಯಾಯವಾಗಿ ಸೇರಿರದ ವಸ್ತುವನ್ನು ಎಂದಿಗೂ ಮುಟ್ಟಬಾರದು, ಬಯಸಲೂಬಾರದು. ಇತರರೂ ನಮ್ಮ ವಿಷಯದಲ್ಲಿ ಹಾಗೆಯೇ ನಡೆದುಕೊಳ್ಳಬೇಕು.

**ಬ್ರಹ್ಮಚರ್ಯ:** ಮನುಷ್ಯನ ವ್ಯಕ್ತಿತ್ವದಲ್ಲಿ ಪ್ರಕೃತಿದತ್ತವಾದ ಕಾಮವು ಅತ್ಯಂತ ಪ್ರಬಲ ಶಕ್ತಿ. ಇದರ ಸದುಪಯೋಗದಿಂದ ಸತ್ಸಂತಾನವಾಗುವಂತೆಯೇ ದುರುಪಯೋಗದಿಂದ ಸಮಾಜವೇ ಹತ್ತಿಕೊಂಡು ಉರಿಯಬಹುದು. ಶಾಸ್ತ್ರೋಕ್ತ ರೀತಿಯಲ್ಲಿ ಬ್ರಹ್ಮಚರ್ಯವನ್ನು, ಅಂದರೆ, ಇಂದ್ರಿಯನಿಗ್ರಹವನ್ನು ಆಚರಿಸುವುದೊಂದೇ ಇದನ್ನು ಹತೋಟಿಯಲ್ಲಿಡುವ ಮಾರ್ಗ. ಅಷ್ಟೇ ಅಲ್ಲ, ಇದು ಆವಶ್ಯಕವೂ ಕೂಡ.

**ಅಪರಿಗ್ರಹ:** ಯಮದಲ್ಲಿ ಕಡೆಯದೇ ಅಪರಿಗ್ರಹ. ಮನುಷ್ಯನ ಆಶೆಗೆ ಮಿತಿಯಿಲ್ಲ. ಒಬ್ಬನ ದುರಾಶೆಯಿಂದ ಹತ್ತು ಜನ ಉಪವಾಸ ಮಾಡಬೇಕಾಗಬಹುದು. ಆದುದರಿಂದಲೇ ನಮ್ಮ ಆವಶ್ಯಕತೆಗಿಂತ ಹೆಚ್ಚು ವಸ್ತುಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳಬಾರದು.

ಈ ಕಟ್ಟಳೆಯು ಇತರರು ನಮಗೆ ನೀಡುವ ವಸ್ತುಗಳಿಗೆ ಅನ್ವಯಿಸುವಂತೆ ನಮ್ಮ ಸಂಪಾದನೆಗೂ ಅನ್ವಯಿಸುತ್ತದೆ ಎಂಬುದನ್ನು ಮರೆಯಬಾರದು. ಇವೆರಡೂ ಧರ್ಮಸಂಮತವಾಗಿರಬೇಕು ಎಂಬುದನ್ನಂತೂ ಪ್ರತ್ಯೇಕವಾಗಿ ಹೇಳಲೇಬೇಕಾಗಿಲ್ಲ.

**ನಿಯಮ**

ಇನ್ನು ನಿಯಮ. ಇದು ವೈಯಕ್ತಿಕ ಜೀವನಕ್ಕೆ ಅನ್ವಯವಾಗತಕ್ಕದ್ದು. ವ್ಯಕ್ತಿಯು ಉತ್ತಮನಾದರೆ ಸಮಾಜವೂ ಉತ್ತಮವಾಗುವುದರಿಂದ ಇವುಗಳ ಪಾಲನೆಯೂ ತುಂಬಾ ಆವಶ್ಯಕ.

**ಶೌಚ:** ಇದರ ಮೊದಲನೆಯ ಅಂಗವೇ ಶೌಚ; ದೇಹೇಂದ್ರಿಯಗಳ ಮತ್ತು ಪರಿಸರದ ಶುಚಿತ್ವ. ಇದು ದೇಹದ ಆರೋಗ್ಯವನ್ನು

ಕಾಪಾಡಲು ಸಹಕಾರಿಯಾಗುವಂತೆಯೇ ಮನಸ್ಸಿನ ಸಮಾಧಾನಕ್ಕೆ ಕೂಡ ಸಹಕಾರಿ.

**ಸಂತೋಷ:** ಎರಡನೆಯದೇ ಸಂತೋಷ ಅಥವಾ ತೃಪ್ತಿ. ಅತ್ಯಾಶೆ ಪಡದೆ ಅಲ್ಪದರಲ್ಲಿ ತೃಪ್ತಿ–ಸಮಾಧಾನಗಳನ್ನು ಪಡೆಯುವ ಗುಣ. ಇದು ಮನಶ್ಶಾಂತಿಗೂ ಸಹಕಾರಿ.

**ತಪಸ್ಸು:** ತಪಸ್ಸು ಮೂರನೆಯ ಅಂಗ. ದೇಹ, ಇಂದ್ರಿಯಗಳು, ಮಾತು, ಮನಸ್ಸು–ಇವುಗಳನ್ನು ಅತಿಯಾಗಿ ಬೆಳೆಸದೆ, ಅತಿಯಾಗಿ ಕೊರಗಿಸದೆ, ಸಾಧನೆಗೆ ಕರ್ತವ್ಯಪಾಲನೆಗೆ ನೆರವಾಗುವಂತೆ ಹತೋಟಿಯಲ್ಲಿಟ್ಟುಕೊಳ್ಳುವುದು.

**ಸ್ವಾಧ್ಯಾಯ:** ನಾಲ್ಕನೆಯ ಅಂಗವೇ ಸ್ವಾಧ್ಯಾಯ ಎಂದರೆ ಅಧ್ಯಾತ್ಮ ಗ್ರಂಥಗಳ ಅಧ್ಯಯನ, ಇಷ್ಟದೇವತಾ ಮಂತ್ರಜಪ. ಇದು ಮನಶ್ಶುದ್ಧಿಗೆ ಮಾರ್ಗ.

**ಈಶ್ವರಪ್ರಣಿಧಾನ:** ಶುದ್ಧ ಮನಸ್ಸಿನ ಮೂಲಕ ಏರುವ ಮುಂದಿನ ಘಟ್ಟವೇ ಈಶ್ವರಪ್ರಣಿಧಾನ. ಕರ್ಮಗಳನ್ನು ಮತ್ತು ಅವುಗಳ ಫಲಗಳನ್ನು ಭಗವಂತನಿಗೆ ಸಮರ್ಪಿಸುವ ಭಕ್ತಿಭಾವ. ಇದು ಇಡೀ ವ್ಯಕ್ತಿತ್ವವನ್ನು ಉನ್ನತಮಟ್ಟಕ್ಕೆ ಏರಿಸಬಲ್ಲದು.

ಇದರಿಂದ ಸ್ಪಷ್ಟವಾಗುವ ಒಂದಂಶವೆಂದರೆ ನಿಯಮದಿಂದ ವೈಯಕ್ತಿಕ ಜೀವನವನ್ನೂ, ಯಮದಿಂದ ಸಾಮಾಜಿಕ ಜೀವನವನ್ನೂ ಸುಧಾರಿಸಬಹುದು. ಆಗಮಾತ್ರವೇ ನಾವೆಲ್ಲರೂ ಸುಖದಿಂದ ಶಾಂತಿಯಿಂದ ಬಾಳಲು ಸಾಧ್ಯ.

ಹಿಂದೂ ದಾರ್ಶನಿಕರು ನೀಡಿರುವ ಮುಖ್ಯವಾದ ಒಂದು ಎಚ್ಚರಿಕೆಯನ್ನು ಇಲ್ಲಿ ನೆನಪಿಸಬೇಕಾದುದು ನಮ್ಮ ಕರ್ತವ್ಯ. ಅದೇ 'ಮಾಡಿದ್ದುಣ್ಣೋ ಮಹರಾಯ' ಎಂಬ ಕರ್ಮನಿಯಮ. ಇದು ಭೌತಿಕ ನಿಯಮಗಳಷ್ಟೇ, ಅಥವಾ, ಅವಕ್ಕಿಂತ ಅಧಿಕವಾಗಿ ಸತ್ಯ. ಅವನ್ನು ಮೀರಿದರೆ ಉಂಟಾಗುವ ಪರಿಣಾಮವು ಭಯಂಕರ. ಬೆಂಕಿಯಲ್ಲಿ ಕೈಯಿಟ್ಟು ಅದು ಸುಡಬೇಡವೆಂದು ಬಯಸಿದರೆ ಅಥವಾ ಭಾವಿಸಿದರೆ ಹಾಗೆಯೇ ಆದೀತೆ?

ಆದುದರಿಂದ ಮಹಾಭಾರತದಲ್ಲಿ ಹೇಳಿರುವ **'ಧರ್ಮೋ ರಕ್ಷತಿ ರಕ್ಷಿತಃ'** (ನಾವು ಧರ್ಮವನ್ನು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ) ಎಂಬ ಶಾಶ್ವತ ತತ್ತ್ವವನ್ನು ನಂಬಿ ನಡೆಯೋಣ. ▪

## ಕಲಿಯು ಎಲ್ಲೆಲ್ಲಿ ನೆಲೆಸುತ್ತಾನೆ?

ಪಾಂಡವರ ಮೊಮ್ಮಗ ಪರೀಕ್ಷಿತ. ಅವನು ಧರ್ಮದಿಂದ ರಾಜ್ಯವನ್ನಾಳುತ್ತಿದ್ದನು. ಅವನ ರಾಜ್ಯದಲ್ಲಿ ಕಲಿಪುರುಷನು ಹೊಕ್ಕಿರುವನೆಂಬ ವರ್ತಮಾನ ಬಂದಿತು. ಅವನನ್ನು ಹೊಡೆದೋಡಿಸಬೇಕೆಂದು ಪರೀಕ್ಷಿತ್ ಸೈನ್ಯದೊಡನೆ ಹೊರಟನು. ಮಾರ್ಗಮಧ್ಯದಲ್ಲಿ ಒಂದು ಆಶ್ಚರ್ಯಕರ ದೃಶ್ಯ ಕಾಣಿಸಿತು. ಹಸುವೊಂದು ಅಳುತ್ತಿತ್ತು; ಅದರ ಪಕ್ಕದಲ್ಲಿಯೇ ಇದ್ದ ಎತ್ತಿಗೆ ಕೇವಲ ಒಂದೇ ಕಾಲು ಇತ್ತು. ಭೂದೇವಿಯು ಗೋವಿನ ರೂಪ ತಾಳಿದ್ದಳು; ಧರ್ಮಪುರುಷನು ಎತ್ತಿನ ರೂಪ ತಾಳಿದ್ದನು. ಕಲಿಯ ಪ್ರವೇಶದಿಂದ ಧರ್ಮದ ಅವಸಾನವಾಗುತ್ತಿದೆಯೆಂದು ಭೂದೇವಿ, ಪರೀಕ್ಷಿತ್ತಿನ ಮುಂದೆ ಕಣ್ಣೀರುಗರೆದಳು.

ಆ ಸಮಯದಲ್ಲಿ ರಾಜವೇಷವನ್ನು ಧರಿಸಿದ ದುರುಳನಂತೆ ಕಾಣುತ್ತಿದ್ದ ವ್ಯಕ್ತಿಯೊಬ್ಬ ಅಲ್ಲಿಗೆ ಬಂದನು. ಅವನೇ ಕಲಿ. ಹಸು ಮತ್ತು ಎತ್ತುಗಳೆರಡನ್ನೂ ಅವನು ಹಿಂಸಿಸಲಾರಂಭಿಸಿದನು. ಅದನ್ನು ನೋಡಿ ಪರೀಕ್ಷಿತ್ ಮಹಾರಾಜನಿಗೆ ಬಹಳ ಕೋಪ ಬಂತು. ಅವನನ್ನು ಗದರಿ, ಕೊಲ್ಲಲು ಕತ್ತಿಯನ್ನೆತ್ತಿದನು. ಆಗ ಕಲಿಯು ರಾಜನ ಕಾಲಿಗೆ ಬಿದ್ದು ಶರಣಾದಾಗ, ತನ್ನ ರಾಜ್ಯದಿಂದ ಹೊರಟುಹೋಗುವಂತೆ ಪರೀಕ್ಷಿತ್ ಆದೇಶವಿತ್ತನು. ಆಗ ಕಲಿಪುರುಷನು ಅದಕ್ಕೆ ಒಪ್ಪಿಕೊಂಡು, ತನಗೆ ಇರುವುದಕ್ಕೆ ಯಾವುದಾದರೂ ಒಂದು ಸ್ಥಳವನ್ನು ತೋರಿಸಬೇಕೆಂದು ರಾಜನನ್ನು ಬೇಡಿಕೊಂಡನು. ಆಗ ಮಹಾರಾಜನು ಹೀಗೆಂದನು: "ಅಯ್ಯಾ, ಕಲಿಪುರುಷ, ನೀನು ಮೋಸದ ತವರುಮನೆಯಾದ **ಜೂಜು**, ಮದಕ್ಕೆ ಕಾರಣವಾಗುವ **ಮದ್ಯ**, ವ್ಯಭಿಚಾರಕ್ಕೆ ಕಾರಣಳಾಗುವ **ಹೆಣ್ಣು**, (*ಕಾಮಪ್ರಚೋದಕವಾದದ್ದು ಎಂಬ ದೃಷ್ಟಿಯಿಂದ ಮಾತ್ರ ಗಂಡು ಹೆಣ್ಣಿಗೆ ಕಾಮಪ್ರಚೋದಕವಾದರೆ ಗಂಡೂ ಕೆಡುಕೇ– ಸಂ.*) ಹಿಂಸೆ ನೆಲೆಸಿರುವ **ಕೊಲೆ** – ಈ ನಾಲ್ಕರಲ್ಲಿ ನೆಲೆಸು" ಎಂದನು. ಕಲಿಯು " ನೀನು ಹೇಳಿದ ನಾಲ್ಕೂ ಅಧರ್ಮಗಳು ನೆಲೆಸಿರುವ ಒಂದೇ ಸ್ಥಳವನ್ನು ತೋರಿಸು" ಎಂದು ಕೇಳಿಕೊಂಡನು. ಆಗ ಆ ನಾಲ್ಕು ಅಧರ್ಮಗಳಲ್ಲದೆ, **ವೈರ** ಎಂಬ ಐದನೆಯ ಅಧರ್ಮಕ್ಕೂ ನಿವಾಸವಾದ **ಬಂಗಾರವನ್ನು** ತೋರಿಸಿದನು. ಪರೀಕ್ಷಿತ್ ತೋರಿಸಿದ ಜಾಗಗಳಲ್ಲಿ ಸೇರಿ, ಕಲಿಯು ಅವುಗಳಲ್ಲಿ ವಿಹರಿಸಲಾರಂಭಿಸಿದನು. **(ಭಾಗವತ: ೧.೧೬–೧೭)**

**"ವೀರ ನರೇಂದ್ರ ವಿವೇಕಾನಂದ"**: ***ವಿವೇಕಾನಂದರನ್ನು ಕುರಿತು ಎನಿಮೇಟೆಡ್ ಚಲನಚಿತ್ರ*** : **ಶ್ರೀರಾಮಕೃಷ್ಣ ಮಠ, ಮೈಲಾಪುರ, ಚೆನ್ನೈ**

ಸಹಜ ಸುಂದರವಾದ ಜಗತ್ತನ್ನು ದೇವರು ಸೃಷ್ಟಿಸಿದ್ದಾನೆ. ಇದನ್ನು ಇನ್ನೂ ಹೆಚ್ಚು ಸುಂದರಗೊಳಿಸಲು, ಲಲಿತಕಲೆಗಳಲ್ಲಿ ಒಂದಾದ, ಎನಿಮೇಶನ್ ತಂತ್ರಜ್ಞಾನವನ್ನು ಮಾನವನು ಬಳಸಿಕೊಂಡಿದ್ದಾನೆ. ಈ ಚಲನಚಿತ್ರದಲ್ಲಿ ಸ್ವಾಮೀಜಿಯವರ ಸಮಗ್ರ ಜೀವನದ ಅವಿಸ್ಮರಣೀಯ ಸನ್ನಿವೇಶ, ಸಂದರ್ಭ, ಘಟನೆಗಳನ್ನು ಸರಳ, ಆಕರ್ಷಣೀಯ, ಸ್ಫೂರ್ತಿದಾಯಕ, ಹಾಗೂ ಫಲದಾಯಕವಾಗಿ ನಿರೂಪಿಸಲಾಗಿದೆ. ವಯಸ್ಸು, ಅನುಭವ, ಅನುಭಾವ–ಇವುಗಳ ಅಭಿವ್ಯಕ್ತಿಗೆ ಸರಿಹೊಂದುವ ಮಾಡೆಲ್ ರಚನೆಗಳನ್ನು ಮಾಡಲಾಗಿದೆ. ಎಲ್ಲ ವಯಸ್ಸಿನವರಿಗೂ ಅತಿ ಸುಲಭವಾಗಿ ಅರ್ಥವಾಗುವ ಪರಿಣಾಮಕಾರಿ ಸಂಭಾಷಣೆ ಇದೆ. ಸಂದರ್ಭೋಚಿತವಾದ ಮಧುರ ಹಿನ್ನೆಲೆ ಸಂಗೀತವಿದೆ. ವಿಶ್ವಮಿತ್ರರಾದ ಸ್ವಾಮಿ ವಿವೇಕಾನಂದರ ಈ ಅನಿಮೇಶನ್ ಚಲನಚಿತ್ರವು ಪ್ರತಿಯೊಂದು ಮನೆ, ಶಾಲಾಕಾಲೇಜು ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿ ಇರಬೇಕಾದುದು ಅಗತ್ಯ. ವಿವೇಕಾನಂದರ ದಿವ್ಯ ಜೀವನೋದ್ದೇಶವನ್ನು ಪರಿಪೂರ್ಣವಾಗಿ ತಿಳಿಯಲಿಚ್ಛಿಸುವವರೆಲ್ಲರೂ ಈ ಅನಿಮೇಶನ್ ಚಲನಚಿತ್ರವನ್ನು ಕೊಂಡು ನೋಡಿ, ಆನಂದಿಸಿದಾಗ ಮಾತ್ರ ಈ ಒಳ್ಳೆಯ ಪ್ರಯತ್ನವು ಪೂರ್ಣವಾಗಿ ಸಫಲವೂ ಸಾರ್ಥಕವೂ ಆಗುತ್ತದೆ. ಇದರ ಬೆಲೆಯೂ ಕೈಗೆ ಎಟಕುವಂತಿದೆ. **(ಬೆಲೆ: ಸಿ.ಡಿ.: ರೂ.೧೫೦; ಡಿ.ವಿ.ಡಿ.: ರೂ.೨೦೦)** **(ವಿಮರ್ಶೆ: ಪ್ರೊ. ಬಿ. ಕೃಷ್ಣ, ಮೈಸೂರು)**